

# ಹಿನ್ನೆಲೆ ಗಾಯನಕ್ಕೇಕೆ ಕೊನೆ ನಮಸ್ಕಾರ?

'ದಿಲ್ ಸಂಭಲ್ ಜಾ ಝರಾ... ಫಿರ್ ಮೊಹಬ್ಬತ್ ಕರ್ನೆ ಚಲಾ...' (ಹೃದಯವೇ ತುಸು ನಿಧಾನಿಸು... ಆಮೇಲೆ ಪ್ರೀತಿಸಲು ಮುಂದಾಗು) ಎಂಬ ಸಾಲು ಅರಿಜೀತ್ ಕಂಠದಲ್ಲಿ ಮೊದಲು ಹೊಮ್ಮಿದಾಗ ಭಗ್ನ, ಸಿದ್ಧ, ಮುಗ್ಧ ಪ್ರೇಮಿಗಳೆಲ್ಲ ಹೆಜ್ಜೆ ಹಾಕುವುದನ್ನು ನಿಲ್ಲಿಸಿ ಕಿವಿಗೊಟ್ಟರು. 'ಹಮ್ ತೇರೆ ಬಿನ್ ಅಬ್ ರೆಹೆ ನಹಿ ಸಕ್ತೆ ತೇರೆ ಬಿನಾ ಕ್ಯಾ ವಜೂದ್ ಮೇರಾ' ಅಂತ ತಾರಕ ಸ್ವರವನ್ನು ಅದೇ ಗಾಯಕ ಹೊಮ್ಮಿಸಿದಾಗ ಹೆಣ್ಣುಮಕ್ಕಳು ಆತನಲ್ಲಿ ಬೆಚ್ಚಗಿನ ಪ್ರೀತಿ ಕಹಳೆ ಮೊಳಗಿಸುವ ಕಿಂದರಿಜೋಗಿಯನ್ನು ಕಂಡರು. 'ಮರ್ಡರ್ 2' ಹಿಂದಿ ಸಿನಿಮಾದ 'ದಿಲ್ ಸಂಭಲ್ ಝರಾ' ಹಾಡಿಗೆ ಮಟ್ಟು ಹಾಕಿದ್ದು ಮಿಥುನ್. ವಿರಹದ ಭಾವಕ್ಕೆ ನೋವನ್ನು ಲೇಪಿಸಿ ಹಾಡುವ, ತುಸುವೇ ಗಾರು ಗಾರು ಸದ್ದನ್ನು ಹುದುಗಿಸಿಕೊಂಡ ಅರಿಜೀತ್ ಸಾಮರ್ಥ್ಯವನ್ನು ಅವರು ಚೆನ್ನಾಗಿಯೇ ದುಡಿಸಿಕೊಂಡ ಹಾಡು ಅದು. ಅದಾಗಿ ಹದಿನೈದು ವರ್ಷಗಳು ಉರುಳಿವೆ. ಈಗ, ಅದೂ ತಮ್ಮ ಹಿನ್ನೆಲೆ ಗಾಯನ ಬದುಕಿನ ಉತ್ತುಂಗದಲ್ಲಿ ಇರುವಾಗ ಅರಿಜೀತ್ ಇನ್ನು ಮುಂದೆ ಆ ಕೆಲಸ ಮಾಡುವುದಿಲ್ಲ ಎಂದು ಸಾಮಾಜಿಕ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

ಎಸ್.ಪಿ. ಬಾಲಸುಬ್ರಹ್ಮಣ್ಯಂ ಹಾಡಿರುವ ಅಷ್ಟೂ ಹಾಡುಗಳನ್ನು ದಿನಕ್ಕೆ ಎರಡರಂತೆ ಕೇಳಿದರೂ ಮುಗಿಯಲು ದಶಕವೇ ಬೇಕು ಎಂದು ಬೆರಗುಗೊಂಡಿದ್ದ ನಮಗೆ ಈ ವಿದ್ಯಮಾನ ಅಚ್ಚರಿ ತಂದಿರುವುದು ಸಹಜವೇ. ಅವರು ಹಿನ್ನೆಲೆ ಗಾಯನಕ್ಕಷ್ಟೇ ಬೆನ್ನು ಮಾಡಿರುವುದು. ಶಾಸ್ತ್ರೀಯ ಸಂಗೀತದ ವಿದ್ಯಾರ್ಥಿಯಾಗಿ ಹೊಸತೇನನ್ನೋ ಸಾಧಿಸುವ ಉಮೇದು ಇಟ್ಟುಕೊಂಡಿದ್ದಾರೆ ಎಂದು ಕೆಲವರು ಹೇಳುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಹೊಸತೊಂದು ರಾಜಕೀಯ ಪಕ್ಷ ಕಟ್ಟುವ ಮೂಲ ಕೆಲಸಗಳನ್ನು ಅದಾಗಲೇ ಅವರು ಪ್ರಾರಂಭಿಸಿದ್ದಾರೆ ಎಂಬ ಸುದ್ದಿಯೂ ಇದೆ. ಆದರೆ, ತಾವು ಹಿನ್ನೆಲೆ ಗಾಯನಕ್ಕೆ ಒಲ್ಲೆ ಎಂದದ್ದು ಯಾಕೆಂದು ಅರಿಜೀತ್ ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ.

ಅವರು ಈಗ ನವಾಜುದ್ದೀನ್ ಸಿದ್ದಿಕಿ ಪುತ್ರಿ ಶೋರಾ ಅವರ ಅಭಿನಯದ ಸಿನಿಮಾವೊಂದನ್ನು ನಿರ್ದೇಶಿಸಲಿದ್ದಾರೆ ಎಂಬ ತಾಜಾ ಸುದ್ದಿ ಬಂದಿದೆ. ಅದೇನೇ ಇರಲಿ, ಅರಿಜೀತ್ ಗಾನಪಯಣ ಮೆಲುಕು ಹಾಕುವಂಥದ್ದು. ಅವರು ಪಕ್ಕಾ ಶಾಸ್ತ್ರೀಯ ಎನ್ನುವಂಥ 'ತುಝೆ ಯಾದ್ ಕರ್ ಲಿಯಾ ಹೈ ಆಯತ್ ಕೀ ತರ್ಹಾ' ಹಾಡನ್ನು ಸೊಗಸಾಗಿ ಹಾಡಿದ್ದಾರೆ. 'ತೂ ಸಫರ್ ಮೇರಾ ಹೈ ತೂ ಹಿ ಮೇರಿ ಮಂಜಿಲ್' ಹಾಡಿನಲ್ಲಿ ವಿರಹಿಯ ಆರ್ತನಾದ ಉಳಿಸಿದ್ದಾರೆ. ಕೇಸರಿಯಾ 'ತೇರಾ ಇಷ್ಕ್ ಹೈ ಪಿಯಾ' ಎಂದು ಪ್ರೇಮಿಯ ಆಲಾಪ ಕೇಳಿಸಿದ್ದಾರೆ. 'ಅಚ್ಛಾ ಚಲ್ ತಾ ಹೂಂ' ಎಂಬ ಅವರದ್ದೇ ಹಾಡಿನ ಸಾಲನ್ನೀಗ ಅನೌನ್ಸ್‌ಮೆಂಟ್ ಆಗಿಸಿ, ಮುಂದಡಿ ಇಟ್ಟಿದ್ದಾರೆ. ವಾರಕ್ಕೆ ಸರಾಸರಿ ಕನಿಷ್ಠ ಒಂದರಂತೆ ಹಾಡುಗಳನ್ನು ಹಾಡುತ್ತಾ ಬಂದ ಸರಳ ಜೀವಿಯೂ ಆದ ಗಾಯಕನ ಇಂತಹ ನಿರ್ಧಾರ ಭಾರತದಲ್ಲಿ ಸದ್ಯ ಬಹುಚರ್ಚಿತ ವಿಷಯಗಳಲ್ಲಿ ಒಂದು. ಅರಿಜೀತ್ ತೀವ್ರತೆಗೆ ಇದುವೇ ಸಾಕ್ಷಿ. ■



> ಹಿನ್ನೆಲೆ ಗಾಯನ ಒಂದು ಅಸೈನ್ಮೆಂಟ್ ಅಷ್ಟೆ. ಅದರಲ್ಲಿ ಸೃಜನಶೀಲ ಸ್ವಾತಂತ್ರ್ಯ ಬೇರೆ ಯಾರದ್ದೋ ಆಗಿರುತ್ತದೆ. ಸ್ವಂತ ರಚನೆಗೆ ಬೇರೆಯದೇ ತೂಕ. ಬಹುಶಃ ಅರಿಜೀತ್ ಅತ್ತ ವಾಲುತ್ತಿದ್ದಾರೆ. ಬೇರೆ ದೇಶಗಳಲ್ಲಿ ಇಂತಹ ಬೆಳವಣಿಗೆ ಸಾಮಾನ್ಯ.
>
> -ಶೆರ್ಲಿ ಸಿಂಗ್, ಮ್ಯೂಸಿಕ್ ರೈಟ್ಸ್ ಮ್ಯಾನೇಜ್‌ಮೆಂಟ್ ಸಿಇಒ

## ಸಲ್ಮಾನ್ ಗೇಲಿ ಮಾಡಿದ್ದ ನೆನಪು

ಒಂದೊಮ್ಮೆ ಸಿನಿಮಾ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ನಟ ಸಲ್ಮಾನ್ ಖಾನ್ ಅತಿಥಿಯಾಗಿ ಪ್ರಶಸ್ತಿ ನೀಡಲು ನಿಂತಿದ್ದರು. ಗಾಯಕ ಅರಿಜೀತ್ ಅವರಿಂದ ಪ್ರಶಸ್ತಿ ಸ್ವೀಕರಿಸಲು ಬಂದರು. ಮನೆಯಲ್ಲಿ ಹಾಕುವಂತಹ ಸರಳ ವಸ್ತ್ರ ಹಾಕಿಕೊಂಡು ಬಂದಿದ್ದ ಗಾಯಕನನ್ನು ನೋಡಿ ಸಲ್ಮಾನ್, 'ಇದೇನು ನಿದ್ದೆಯಿಂದ ಎದ್ದು ಬಂದಂತಿದೆ' ಎಂದು ಕಾಲೆಳೆದರು. ಅದಕ್ಕೆ ಅರಿಜೀತ್, 'ಹೌದು ಸ್ವಾಮಿ... ನಿಮ್ಮಂತಹವರೆಲ್ಲ ನಮ್ಮನ್ನು ಮಲಗಿಸಿಬಿಟ್ಟಿದ್ದೀರಿ' ಎಂದು ತಿರುಗೇಟು ಕೊಟ್ಟರು. ಅದು ಸಲ್ಮಾನ್ ಅವರನ್ನು ಕೆರಳಿಸಿತು.

'ಸುಲ್ತಾನ್' ಹಿಂದಿ ಚಿತ್ರದ 'ಜಗ್ ಘೂಮೆಯಾ' ಎಂಬ ಹಾಡನ್ನು ಮೊದಲು ಅರಿಜೀತ್ ಹಾಡಿದ್ದರು. ಅದನ್ನು ತಿರಸ್ಕರಿಸಿ, ರಾಹತ್ ಫತೇಹ್ ಅಲಿ ಖಾನ್ ಅವರಿಂದ ಮತ್ತೆ ಹಾಡಿಸಲು ಸಲ್ಮಾನ್ ಕಾರಣರಾಗಿದ್ದರು.



ತಮ್ಮ ತಪ್ಪನ್ನು ಅರಿಕೆ ಮಾಡಿಕೊಳ್ಳಲು ಅರಿಜೀತ್ ಆಮೇಲೆ ಹಲವು ಬಾರಿ ಸಲ್ಮಾನ್ ಅವರಿಗೆ ಮೊಬೈಲ್ ಮೂಲಕ ಸಂದೇಶ ಕಳುಹಿಸಿದ್ದಾಗಿ ಹೇಳಿದರು. ಈಗ 'ಬ್ಯಾಟಲ್ ಆಫ್ ಗಲ್ವಾನ್' ಹಿಂದಿ ಸಿನಿಮಾಗೆ ಅರಿಜೀತ್ ಗೀತೆಯೊಂದನ್ನು ಹಾಡಿದ್ದಾರೆ. ಸಲ್ಮಾನ್ ಹಾಗೂ ಅವರ ನಡುವೆ ಸಂಬಂಧ ಸರಿಹೋಗಿರುವುದಕ್ಕೆ ಇದು ಉದಾಹರಣೆ.

ಮುರ್ಶಿದಾಬಾದ್‌ನ ಜಿಯಾಗಂಜ್‌ನಲ್ಲಿ ತಮ್ಮ ಮನೆ, ತಾವೇ ನಿರ್ಮಿಸಿದ ಸ್ಟುಡಿಯೊದಲ್ಲಿ ಅರಿಜೀತ್ ಏನೆಲ್ಲ ಸಂಗೀತದಲೆ ಹೊಮ್ಮಿಸುವರೋ ಎಂದು ಅನೇಕರು ಕುತೂಹಲಿಗಳಾಗಿದ್ದಾರೆ.



> ಅರಿಜೀತ್ ಸಿಂಗ್ ಬದುಕಿನ ಮಹತ್ವದ ಹಂತದ ಪ್ರಾರಂಭ ಇದು. ಈ ಮಹಾಪ್ರತಿಭೆಯಿಂದ ಏನು ಹೊಮ್ಮಲಿದೆ ಎಂದು ಆಲಿಸಲು, ಅನುಭವಿಸಲು ನಾನು ಉತ್ಸುಕಳಾಗಿ ಇದ್ದೇನೆ.
>
> -ಶ್ರೇಯಾ ಘೋಷಾಲ್,
> ಸಾಮಾಜಿಕ ಮಾಧ್ಯಮದ ಪೋಸ್ಟಿನಲ್ಲಿ